# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಂದಾಯ ಅಧಿಕಾರಿಗಳ ಕಛೇರಿ, ಗೋವಿಂದರಾಜನಗರ ವಿಭಾಗ, ಪಾಲಿಕೆ ಸೌಧ, 14ನೇ ಅಡ್ಡರಸ್ತೆ, 1ನೇ ಹಂತ, ಚಂದ್ರಾಬಡಾವಣೆ, ಬೆಂಗಳೂರು-560072.

ಸಂಖ್ಯೆ: ಕಂ.ಅ(ಗೋ.ನ)/ಪಿ.ಆರ್/25/2020 ದಿನಾಂಕ :02/01/2021

ದಿನಾಂಕ: 02.01.2021 ರಂದು ವಾರ್ಡ್ 126 ಮಾರುತಿ ಮಂದಿರ ನೋಡಲ್ ಅಧಿಕಾರಿ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು:

| ಹಾಜರಿದ್ದ ಅಧಿಕಾರಿಗಳು: | ಗೈರು ಹಾಜರಾದ ಅಧಿಕಾರಿಗಳು |
|---|---|
| 1. ಕಂದಾಯ ಅಧಿಕಾರಿ (ಗೋವಿಂದರಾಜನಗರ) | ವಿಜಯನಗರ ಟ್ರಾಫಿಕ್ ಪೋಲಿಸ್ ಠಾಣೆ |
| 2. ಸಹಾಯಕ ಅಭಿಯಂತರರು ವಾರ್ಡ್ 126 | ಬೆಸ್ಕಾಂ ಇಲಾಖೆ |
| 3. ಪಶು ಸಂಗೋಪನೆ ಇಲಾಖೆ | ಬಿ.ಡಬ್ಲ್ಯೂ.ಎಸ್.ಎಸ್.ಬಿ. |
| 4. ತೋಟಗಾರಿಕೆ ಪರಿವೀಕ್ಷಕರು | ಆರೋಗ್ಯ ಇಲಾಖೆ |
| 5. ಕೆನರಾಬ್ಯಾಂಕ್ ಕಾಲೋನಿ ವೆಲ್‌ಫೇರ್ ಅಸೋಸಿಯೇಷನ್ | |
| 6. ವಿನಾಯಕ ಬಡಾವಣೆ ವೆಲ್‌ಫೇರ್ ಅಸೋಸಿಯೇಷನ್ | |

ವಾರ್ಡ್‌ನ ಅಧ್ಯಕ್ಷರು ಸಭೆಗೆ ಹಾಜರಾದವರನ್ನು ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಲಾಯಿತು.

ವಾರ್ಡ್ 126 ಮಾರುತಿ ಮಂದಿರ ವಾರ್ಡ್ ವ್ಯಾಪ್ತಿಯಲ್ಲಿ ಉದ್ಯಾನವನದ ನಿರ್ವಹಣೆ, ಘನತ್ಯಾಜ್ಯ ನಿರ್ವಹಣೆ, ರಸ್ತೆಗುಂಡಿ ಮುಚ್ಚುವ ಬಗ್ಗೆ ಬೀದಿ ದೀಪಗಳ ನಿರ್ವಹಣೆ, ಮರಗಳ ರೆಂಬೆಗಳನ್ನು ಕಡಿಯುವ, ಸಿಸಿ ಕ್ಯಾಮರಗಳ ಅಳವಡಿಕೆಗೆ ಸಂಬಂಧಿಸಿದಂತೆ ಹಾಗೂ ಇತರೆ ವಿಷಯಗಳ ಬಗ್ಗೆ ವಿಸ್ತಾರವಾಗಿ ಚರ್ಚಿಸಲು ಕರೆಯಲಾಯಿತು.

1. <u>ಕೊಂಬೆಗಳನ್ನು ಕತ್ತರಿಸುವಿಕೆ: (ಅರಣ್ಯ ಇಲಾಖೆ)</u>

ವಾರ್ಡ್ 126ರಲ್ಲಿನ ಕೆನರಾ ಬ್ಯಾಂಕ್ ಕಾಲೋನಿ, ವಿನಾಯಕ ಬಡಾವಣೆ, ಮತ್ತು ಇತರೆ ಪ್ರದೇಶಗಳಲ್ಲಿನ ಬೀದಿ ಬದಿಯಲ್ಲಿನ ಮರದ ಕೊಂಬೆಗಳು ದೊಡ್ಡದಾಗಿ ಬೆಳೆದಿದ್ದು, ಇದರಿಂದ ತೊಂದರೆಯಾಗುತ್ತಿರುವುದರಿಂದ ಸದರಿ ಬಡಾವಣೆಗಳಲ್ಲಿನ ಮರದ ಕೊಂಬೆಗಳನ್ನು ಗುರುತಿಸಿ, ಮಾಲೀಕರಿಂದ ಪತ್ರ ಪಡೆದು, ನಿಯಾಮವಳಿಗಳಂತೆ, ಮರದ ಕೊಂಬೆಗಳನ್ನು ಕತ್ತರಿಸುವಲ್ಲಿ (Trimming of Trees) ಕ್ರಮ ಕೈಗೊಳ್ಳುವಂತೆ ಸೂಚಿಸಲಾಯಿತು.

ಕ್ರಮ: ವಲಯ ಅರಣ್ಯಾಧಿಕಾರಿಗಳು

2. <u>ರಸ್ತೆಗಳ ಗುಂಡಿಗಳನ್ನು ಮುಚ್ಚುವ ಬಗ್ಗೆ :</u>

ವಾರ್ಡ್ 126ರಲ್ಲಿ ಕೆನರಾ ಬ್ಯಾಂಕ್ ಕಾಲೋನಿ ವೆಲ್‌ಫೇರ್ ಅಸೋಸಿಯೇಷನ್ ರವರು ಸಭೆಯಲ್ಲಿ ಪೂಜಾ ಸ್ಟೋರ್ ಬಳಿ ಮತ್ತು ವಾರ್ಡಿನ ಇತರೆ ರಸ್ತೆಗಳಲ್ಲಿ ಗುಂಡಿಗಳು ಹೆಚ್ಚಾಗಿದ್ದು, ಅಪಘಾತ ಹೆಚ್ಚಾಗುವ ಸಂಭವ ಉದ್ಭವ ಇರುವುದರಿಂದ, ಆದಷ್ಟು ಬೇಗ ಗುಂಡಿಗಳನ್ನು ಮುಚ್ಚುವ ವ್ಯವಸ್ಥೆಯನ್ನು ಮಾಡಬೇಕೆಂದು ತಿಳಿಸಿದರು.

ಕ್ರಮ: ಸ.ಕಾ.ಪಾ.ಅ(ಚಂದ್ರಬಡಾವಣೆ)
ಸಹಾಯಕ ಅಭಿಯಂತರರು, ವಾರ್ಡ್ 126

Scanned by CamScanner

3. **ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ:**

ವಾರ್ಡ್ 126 ರಲ್ಲಿನ ಕೆಲವು ರಸ್ತೆಗಳಲ್ಲಿ BWSSB ರವರಿಂದ ಬೋರ್‌ವೆಲ್‌ಗಳನ್ನು ಅಳವಡಿಸಲಾಗಿದ್ದು ಸದರಿ ಬೋರ್‌ವೆಲ್‌ಗಳಿಂದ ಮನೆಮನೆಗಳಿಗೆ ನೀರು ಸರಬರಾಜು ಆಗುತ್ತಿದ್ದು, ಈಗ ಮಳೆಗಾಲವು ಪ್ರಾರಂಭವಾಗಿದ್ದು ಬೋರ್‌ವೆಲ್‌ನ ನೀರು ಸರಬರಾಜು ಮೀಟರ್‌ಗೆ ತಿಂಗಳಿಗೆ ರೂ 200/- ಗಳಂತೆ, BWSSB ರವರು ನಿಗಧಿಪಡಿಸುತ್ತಿರುವುದರಿಂದ ಅದನ್ನು ತಡೆಯುವಂತೆ ಕ್ರಮ ವಹಿಸಲು ಸೂಚಿಸಲಾಯಿತು. 1ನೇ ಮುಖ್ಯರಸ್ತೆ, 4ನೇ ಮುಖ್ಯರಸ್ತೆ ವಿನಾಯಕ ಬಡಾವಣೆಯಲ್ಲಿ ಬೋರ್‌ವೆಲ್ ದುರಸ್ತಿಯಲ್ಲಿರುವುದನ್ನು ಸರಿಪಡಿಸಲು ಸೂಚಿಸಲಾಯಿತು.

ಕ್ರಮ: ಸ.ಕಾ.ನಿ.ಅ (BWSSB)
ಸಹಾಯಕ ಅಭಿಯಂತರರು

4. **C.C.T.V / ಸಿ.ಸಿ.ಟಿ.ವಿ. ಕ್ಯಾಮಾರಾಗಳನ್ನು ಅಳವಡಿಸಿರುವ ಬಗ್ಗೆ:**

ವಾರ್ಡ್ 126 ಮಾರುತಿ ಮಂದಿರ ವ್ಯಾಪ್ತಿಯಲ್ಲಿ ಎಲ್ಲೆಲ್ಲಿ ಬಿ.ಬಿ.ಎಂ.ಪಿ. ಮತ್ತು ಪೋಲೀಸ್ ಇಲಾಖಾ ವತಿಯಿಂದ ಅಳವಡಿಸಿರುವ ಬಗ್ಗೆ ಮಾಹಿತಿ ಹಾಗೂ ಎಲ್ಲಾ ಸಿ.ಸಿ.ಟಿ.ವಿ. ಕ್ಯಾಮಾರಾಗಳು ಸರಿಯಾಗಿ ಕಾರ್ಯ ನಿರ್ವಹಿಸುತ್ತಿದೆಯೇ ಎಂಬುದರ ಬಗ್ಗೆ ಮಾಹಿತಿ ಹಾಗೂ ಪ್ರತಿಯೊಂದು ಕಂಬದಲ್ಲಿ ಅಳವಡಿಸಿರುವ ಪ್ರದೇಶಗಳಲ್ಲಿ ಕಾರ್ಯಗತವಾಗುತ್ತಿರುವ ಬಗ್ಗೆ ಡಿಸ್‌ಪ್ಲೆ ಯನ್ನು ಮುಂದಿನ ಸಭೆಯಲ್ಲಿ ತೋರಿಸಬೇಕೆಂದು ಹಾಗೂ ಬಿ.ಬಿ.ಎಂ.ಪಿ.ವತಿಯಿಂದ ಎಷ್ಟು ಸಿ.ಸಿ.ಟಿ.ವಿ. ಕ್ಯಾಮಾರಾಗಳನ್ನು ಯಾವ ಯಾವ ರಸ್ತೆಗಳಲ್ಲಿ ಮತ್ತು ಪೋಲೀಸ್ ಇಲಾಖಾ ವತಿಯಿಂದ ಯಾವ ಯಾವ ರಸ್ತೆಗಳಲ್ಲಿ ಅಳವಡಿಸಿರುವ ಬಗ್ಗೆ ಪರಿಪೂರ್ಣ ಮಾಹಿತಿಯನ್ನು ನೀಡಬೇಕೆಂದು ತಿಳಿಸಿರುತ್ತಾರೆ.

ಕ್ರಮ: AEE (Electrical)& Traffice Police
Dept (Vijayanagar)

5. **ಉದ್ಯಾನವನದಲ್ಲಿ ಶೌಚಾಲಯಗಳನ್ನು ಸ್ವಚ್ಛವಾಗಿಡುವ ಬಗ್ಗೆ:**

ವಾರ್ಡ್ 126ರ ಮಾರುತಿ ಮಂದಿರದಲ್ಲಿನ ವಿನಾಯಕ ಬಡಾವಣೆಯ ಹತ್ತಿರದಲ್ಲಿನ ಉದ್ಯಾನವನದಲ್ಲಿ ಶೌಚಾಲಯವಿದ್ದು, ಪ್ರತಿದಿನ ಬೆಳಿಗ್ಗೆ ಸಾರ್ವಜನಿಕರು ಉದ್ಯಾನವನದಲ್ಲಿ ವಾಕಿಂಗ್ ಮಾಡುತ್ತಿರುವುದು ಸರ್ವೆ ಸಾಮಾನ್ಯ. ಆದರೆ, ಉದ್ಯಾನವನದಲ್ಲಿ ಇರುವ ಶೌಚಾಲಯವನ್ನು ಸ್ವಚ್ಛಗೊಳಿಸದೇ ಇರುವುದರಿಂದ ದುರ್ವಾಸನೆ ಕೂಡಿದ್ದು, ಸಾರ್ವಜನಿಕರು ವಾಕಿಂಗ್ ಮಾಡಲು ಕಷ್ಟವಾಗುತ್ತಿರುವುದರಿಂದ, ಉದ್ಯಾನವನದಲ್ಲಿನ ಶೌಚಾಲಯಗಳನ್ನು ಸ್ವಚ್ಚಗೊಳಿಸುವ ವ್ಯವಸ್ಥೆಯನ್ನು ಮಾಡಲು ತಿಳಿಸಿರುತ್ತಾರೆ.

ಕ್ರಮ: ತೋಟಗಾರಿಕೆ ಇಲಾಖೆ

6. **ವಿದ್ಯುತ್ ಕಡತಿಗೊಳಿಸುತ್ತಿರುವ ಬಗ್ಗೆ:**

ವಿದ್ಯುತ್ ಸರಬರಾಜು ಲೈನ್‌ನ್ನು ಮಾರೇನಹಳ್ಳಿಯಿಂದ ಜಿ.ಕೆ.ಡಬ್ಲ್ಯೂ.ಲೇ ಔಟ್‌ಗೆ ಹೊಂದಿಸಿರುವುದರಿಂದ,ಆಗಾಗ ವಿದ್ಯುತ್ ಕಡಿತಗೊಳ್ಳುತ್ತಿದ್ದು, ಸಾರ್ವಜನಿಕರ ಕೆಲಸ ಕಾರ್ಯಗಳಿಗೆ ತೊಂದರೆಯುಂಟಾಗುತ್ತಿರುವುದರಿಂದ, ಸರಬರಾಜು ಲೈನ್‌ನ್ನು ಬೇರೆ ಕಡೆಗೆ ವರ್ಗಾಯಿಸಲು ಕ್ರಮ ತೆಗೆದುಕೊಳ್ಳಲು ತಿಳಿಸಿರುತ್ತಾರೆ.

ಕ್ರಮ: ಬೆಸ್ಕಾಂ ಇಲಾಖೆ

7. **ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ:**

ವಾರ್ಡ್ 126 ರಲ್ಲಿನ ಕೆನರಾ ಬ್ಯಾಂಕ್ ಕಾಲೋನಿ ರೆಸಿಡೆನ್ಸಿ ವೆಲ್‌ಫೇರ್ ಅಸೋಸಿಯೇಷನ್‌ರವರು ಸಭೆಯಲ್ಲಿ ದಿನಾಂಕ: 15/12/2020 ರಂದು ಮುಖ್ಯ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ. ರವರಿಗೆ ಬರೆದ ಮನವಿ ಪತ್ರವನ್ನು ವಾರ್ಡ್ ಕಮಿಟಿಗೂ ಸಹ ನೀಡಿದ್ದು, ಸದರಿ ಮನವಿ ಪತ್ರದಲ್ಲಿನ ಕುಂದುಕೊರತೆಗಳನ್ನು ತ್ವರಿತವಾಗಿ ನಿವಾರಣೆ ಮಾಡಲು ಕೋರಿರುವುದರಿಂದ, ಮನವಿಪತ್ರವನ್ನು ಸಂಬಂಧಪಟ್ಟ ಇಲಾಖೆಗೆ ರವಾನಿಸಿ, ಕೂಡಲೇ ಕ್ರಮ ಕೈಗೊಳ್ಳಲು ಪತ್ರವನ್ನು ಬರೆಯಲಾಗುವುದೆಂದು ತಿಳಿಸಲಾಯಿತು..

ಕ್ರಮ: ಸ.ಕಾ.ನಿ.ಅ (BWSSB)
ಸಹಾಯಕ ಅಭಿಯಂತರರು

Scanned by CamScanner

ಕೊನೆಯಲ್ಲಿ ಸಭೆಯಲ್ಲಿ ಪ್ರಸ್ತಾಪಿಸಿರುವ ವಿಷಯಗಳಿಗೆ ಸಂಬಂಧಿಸಿದಂತೆ ಕ್ರಮ ಕೈಗೊಂಡು ಕೈಗೊಂಡ ಕ್ರಮದ ಬಗ್ಗೆ ಮುಂದಿನ ಸಭೆಯಲ್ಲಿ ವರದಿ ಸಲ್ಲಿಸಿರುವಂತೆ ತಿಳಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಎನ್ ಉಮಾ)
ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿ
ಹಾಗೂ ಕಂದಾಯ ಅಧಿಕಾರಿ
ಕಂದಾಯ ಅಧಿಕಾರಿ
ಗೋವಿಂದರಾಜನಗರ
ಗೋವಿಂದರಾಜನಗರ ವಿಭಾಗ
ವಾರ್ಡ್ 126, ಮಾರುತಿ ಮಂದಿರ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು:

1. ಮಾನ್ಯ ಆಡಳಿತಗಾರರು ರವರ ಅವಗಾಹನೆಗೆ ಮಂಡಿಸಿದೆ.
2. ಮಾನ್ಯ ಆಯುಕ್ತರು ರವರ ಅವಗಾಹನೆಗೆ ಮಂಡಿಸಿದೆ.
3. ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳಿಗೆ ಕಳುಹಿಸುತ್ತಾ ಮುಂದಿನ ಸಭೆಯೊಳಗೆ ಕೈಗೊಂಡ ಕ್ರಮದ ಬಗ್ಗೆ ವರದಿಯನ್ನು ಸಲ್ಲಿಸತಕ್ಕದ್ದು.
4. ಕಛೇರಿ ಕಡತಕ್ಕೆ.

Scanned by CamScanner